**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಮಾಗಡಿ ಇವರ ನ್ಯಾಯಾಲಯದಲ್ಲಿ**
**ಸಿ.ಸಿ ಸಂಖ್ಯೆ: 6022/22**

| | | |
|---|---|---|
| ಹೆಸರು | : | ಡಾಃ ನಾಗನಾಥ್ ವರ್ದನ್ |
| ಗಂಡನ/ತಂದೆಯ ಹೆಸರು | : | ಅಂತೇಶ್ವರ್ ವರ್ದನ್ |
| ವಯಸ್ಸು | : | 50 ವರ್ಷ |
| ವೃತ್ತಿ | : | ವೈದ್ಯಾಧಿಕಾರಿ, ಸರ್ಕಾರಿ ಆಸ್ಪತ್ರೆ, ಮಾಗಡಿ |
| ವಾಸಸ್ಥಳ | : | ಮಾಗಡಿ |

(ದಿನಾಂಕ : 05.06.2026 ರಂದು ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ :**

ನಾನು ದಿಃ 17.08.2017 ರಿಂದ ಈ ವರೆಗೆ ಮಾಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಹಾಗೂ ನೇತ್ರ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 04.08.2022 ರಂದು ನಾನು ಆಸ್ಪತ್ರೆಯಲ್ಲಿರುವ 12.20 ಗಂಟೆ ಸಮಯಕ್ಕೆ ಚಾಸಾ 2 ರವರು ಅಪಘಾತದ ಹಿನ್ನಲೆಯ ಮೇರೆಗೆ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದು, ಸದರಿಯವರನ್ನು ಪರೀಕ್ಷಿಸಲಾಗಿ ಸದರಿಯವರಿಗೆ ಈ ಕೆಳಕಂಡ ಗಾಯಗಳು ಆಗಿರುವುದು ಕಂಡು ಬಂದಿರುತ್ತದೆ.

1. ಎಡ ಭಾಗದ ತಲೆಯ ಮೇಲೆ 3/1 cm ಹರಿದ ಊತ ಗಾಯ ಕಂಡು ಬಂದಿರುತ್ತದೆ.
2. ಕೆಳಭಾಗದ ಬೆನ್ನಿನ ಮೇಲೆ ಊತ ಗಾಯ ಕಂಡು ಬಂದಿರುತ್ತದೆ.

ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಅದರಂತೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದು ಸಾಕ್ಷಿಯು ಸದರಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ 6** ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು **ನಿಪಿ 6(ಎ)** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್.ಆರ್.ಎಸ್ ರವರಿಂದಃ</u>**

ಯಾವುದೇ ಒಬ್ಬ ವ್ಯಕ್ತಿ ದ್ವಿಚಕ್ರ ವಾಹನದಲ್ಲಿ ಹೋಗುತ್ತಿರುವಾಗ ವಾಹನ ಜಾರಿ ಕೆಳಗೆ ಬಿದ್ದಾಗ ವಾಹನದಲ್ಲಿರುವಂತಹ ವ್ಯಕ್ತಿಗೆ ನಿಪಿ 6 ರಲ್ಲಿ ನಮೂದಿಸಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

**<u>ಮರುವಿಚಾರಣೆಃ ಇಲ್ಲ.</u>**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸ. ಎಂ. ಒ. ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯ, ಮಾಗಡಿ.